## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 316/2019

ಸಾಕ್ಷಿಗೆ ದಿನಾಂಕ 04-11-2023 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 3

| | | |
|---|---|---|
| ಹೆಸರು | ಃ | ಎಸ್ ಕೆ ಮಲ್ಲಿಕಾರ್ಜುನ್ |
| ತಂದೆಯ ಹೆಸರು | ಃ | ಎಸ್ ಕಾಟಪ್ಪ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಆಹಾರ ಶಿರಸ್ತೇದಾರರು |
| ವಾಸ ಸ್ಥಳ | ಃ | ಚಿತ್ರದುರ್ಗ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 09-07-2015 ರಿಂದ 30-06-2021 ರವರೆಗೆ ಆಹಾರ ಇಲಾಖೆಯಲ್ಲಿ ಶಿರಸ್ತೇದಾರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10-08-2019 ರಂದು ಮದ್ಯಾಹ್ನ 1 ಗಂಟೆ ಸಮಯದಲ್ಲಿ ಹೊಸಪೇಟೆ ಸಹಾಯಕ ಆಯುಕ್ತರವರ ನೇತೃತ್ವದಲ್ಲಿ ತುಂಗಭದ್ರಾ ಹಿನ್ನೀರಿನ ಪ್ರದೇಶದ ಗ್ರಾಮಗಳ ಪರಿಶೀಲನೆಗಾಗಿ ನಾನು ಚಾಸಾ-5 ರಿಂದ 12 ರವರೊಂದಿಗೆ ತಂಬ್ರಹಳ್ಳಿ, ಕಿತ್ತೂರು ಮತ್ತು ಮುತ್ಕೂರು ಗ್ರಾಮಗಳ ಹತ್ತಿರ ಭೇಟಿ ನೀಡಿದ್ದು, ಗ್ರಾಮದ ಜನತೆಗೆ ಸೂಕ್ತ ತಿಳುವಳಿಕೆ ನೀಡಿದೆವು. ಆ ನಂತರ ಮದ್ಯಾಹ್ನ 3 ಗಂಟೆ ಸಮಯಕ್ಕೆ ಹಂಪಸಾಗರ-3 ಗ್ರಾಮಕ್ಕೆ ಹೋಗಿದ್ದು, ಹಂಪಸಾಗರ-3 ಗ್ರಾಮದಲ್ಲಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಸಮುದಾಯಭವನದಲ್ಲಿರುವ ಪಡಿತರ ಅಕ್ಕಿ ವಿತರಣೆಯನ್ನು ಪರಿಶೀಲಿಸುತ್ತಿರುವಾಗ ಏಕಾಏಕಿ ನ್ಯಾಯಬೆಲೆ ಅಂಗಡಿಯ ಮಾಲೀಕರಾದ ಗಂಗಪ್ಪ, ಸಂತೋಷ್, ಆನಂದ್, ಹನುಮೇಶ್, ರಮೇಶ್ ರವರೆಲ್ಲಾ ಸೇರಿ ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ನಮ್ಮನ್ನು ತಳ್ಳಾಡಿರುತ್ತಾರೆ. ಆ ನಂತರ ನಮಗೆ ಸದರಿ ಆರೋಪಿತರು ಪ್ರಾಣಬೆದರಿಕೆಯನ್ನು ಹಾಕಿದ್ದು, ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ.

ಆ ನಂತರ ನಾವೆಲ್ಲರೂ ತಂಬ್ರಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದು, ನಾನು ಆರೋಪಿತರ ವಿರುದ್ಧ ತಂಬ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ.

ಮರುವಿನ ದಿಃ 11-08-2019 ರಂದು ಹಂಪಸಾಗರ-3 ಗ್ರಾಮದಲ್ಲಿರುವ ಸಮುದಾಯಭವನಕ್ಕೆ ನಾನು, ಚಾಸಾ-17, ಚಾಸಾ-2 ಮತ್ತು 3 ರವರು ಹೋಗಿದ್ದು ಅದೇ

ಸ್ಥಳದಲ್ಲಿ ಬೆಳಿಗ್ಗೆ 7 ರಿಂದ 8 ಗಂಟೆಯವರಗೆ ಕೃತ್ಯಸ್ಥಳ ಪಂಚನಾಮೆಯನ್ನು ಮಾಡಿದರು. ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ: ಖಾಲಿ ಜಾಗ, ಪಃ ಖಾಲಿ ಜಾಗ, ಉಃ ರಸ್ತೆ ಹಾಗೂ ದಃ ಸಮುದಾಯಭವನ ಇರುತ್ತದೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಮತ್ತು ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ಪಂಚನಾಮೆ ಮತ್ತು ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಹಿಗಳನ್ನು ಕ್ರಮವಾಗಿ ನಿಪಿ1 ಸಿ ಮತ್ತು 2 ಸಿ ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ರ ಫೋಟೋಗಳನ್ನು ಹಾಗೂ ನ್ಯಾಯಾಲಯದ ಸಮಕ್ಷಮದಲ್ಲಿರುವ 1 ಮತ್ತು 4 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2, 3 ಮತ್ತು 5 ನೇ ಆರೋಪಿತರ ಗೈರುಹಾಜರಾತಿಯಲ್ಲಿ ಅವರನ್ನು ಗುರುತಿಸಲು ಆರೋಪಿತರ ಪರ ವಕೀಲರ ತಕರಾರು ಇರುವುದಿಲ್ಲ.

ಪಾಟೀ ಸವಾಲು. 1 ರಿಂದ 5 ನೇ ಆರೋಪಿತರ ಪರ ಶ್ರೀ ಟಿ ಎಸ್ ಪಿ ವಕೀಲರಿಂದಃ-

ನಾನು 6 ವರ್ಷಗಳ ಕಾಲ ಹೆಚ್ ಬಿ ಹಳ್ಳಿಯಲ್ಲಿ ಆಹಾರ ಶಿರಸ್ತೇದಾರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. 1 ನೇ ಆರೋಪಿಯ ವಿರುದ್ಧ ಯಾವುದೇ ದೂರುಗಳು ಬಂದಿರಲಿಲ್ಲ. 1 ನೇ ಆರೋಪಿಯ ನ್ಯಾಯಬೆಲೆ ಅಂಗಡಿ ಲೈಸನ್ಸ ನಂ. 45/1998-99 ಇರುತ್ತದೆ. 1 ನೇ ಆರೋಪಿಯು 20 ವರ್ಷಗಳಲ್ಲಿ ನ್ಯಾಯಬೆಲೆ ಅಂಗಡಿ ಲೈಸನ್ಸ ಹೊಂದಿರುತ್ತಾರೆಂದರೆ ಸರಿ. ನಮ್ಮಲ್ಲಿ ಜಾಗೃತಿ ಸಮಿತಿ ಇದ್ದು ಪ್ರತಿ ತಿಂಗಳು ನ್ಯಾಯಬೆಲೆ ಅಂಗಡಿ ಪರಿಶೀಲನೆ ಮಾಡುತ್ತಾರೆಂದರೆ ಸರಿ. ಪ್ರತಿ ತಿಂಗಳು ಪ್ರತಿ ನ್ಯಾಯಬೆಲೆ ಅಂಗಡಿಗಳನ್ನು ಪರಿಶೀಲನೆ ಮಾಡುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು ನಾನೂ ಕೂಡಾ ಪರಿಶೀಲನೆ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ.

ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಆನ್ ಲೈನ್ ಮುಖಾಂತರ ನಡೆಸಲಾಗುತ್ತದೆಂದರೆ ಸರಿ. ನಾವು ಯಾವುದೇ ನ್ಯಾಯಬೆಲೆ ಅಂಗಡಿಗೆ ಹೋಗುವಾಗ ಒಂದು ಕಡತದಲ್ಲಿ ನಮೂದಿಸಿ ಹೋಗುತ್ತೇವೆಂದರೆ ಸರಿ. ಸದರಿ ಕಡತವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ,

ನಿಪಿ-5 ರ ದೂರನ್ನು ನಾನೇ ಬೆರಳಚ್ಚು ಮಾಡಿಸಿ ಸಹಿ ಮಾಡಿ ಕೊಟ್ಟಿರುತ್ತೇನೆ. ಸಾಮಾನ್ಯವಾಗಿ ನ್ಯಾಯಬೆಲೆ ಅಂಗಡಿಯವರ ಪರವಾನಿಗೆ ಸಂಖ್ಯೆಯನ್ನು ಕಡತದಲ್ಲಿ

ಬರೆಯಲಾಗಿರುತ್ತದೆಂದರೆ ಸರಿ. ನಿಪಿ-5 ರಲ್ಲಿ ಅಕ್ಕಿ ವಿತರಣಾ ಕೇಂದ್ರದ ಸಂಖ್ಯೆ: 49/1998-99 ಎಂದು ಬರೆದಿರುತ್ತದೆಂದರೆ ಸರಿ.

ಹೆಚ್ ಬಿ ಹಳ್ಳಿಯಿಂದ ಹೊರಟಾಗ ಸಮಯ ಮದ್ಯಾಹ್ನ 12 ರಿಂದ 1 ಗಂಟೆ ಆಗಿರಬಹುದು, ನಿಖರವಾಗಿ ಸಮಯವನ್ನು ಹೇಳಲು ಆಗುವುದಿಲ್ಲ. ನನ್ನ ಮೇಲಾಧಿಕಾರಿಗಳು ಹೇಳಿದ ಮೇರೆಗೆ ನಾನು ಹೋಗಿರುತ್ತೇನೆ. ಸರಿಯಾಗಿ ಇದ್ದ ಪಕ್ಷದಲ್ಲಿ ನಾನು ಮೇಲಾಧಿಕಾರಿಗಳ ಮಾತನ್ನು ಕೇಳಬೇಕಾಗಿರುತ್ತದೆ.

ಮುತ್ತೂರು ಗ್ರಾಮಕ್ಕೆ ಹೋದಾಗ ಸಮಯ 1.15 ಗಂಟೆಯಾಗಿತ್ತು. ಹೆಚ್ ಬಿ ಹಳ್ಳಿ ಯಿಂದ ಮುತ್ತೂರು ಗ್ರಾಮ 35 ಕಿ ಮೀ ಇರಬಹುದು. ಸದರಿ ರಸ್ತೆಯು ಬಹಳ ಹಾಳಾಗಿತ್ತು ಎಂದರೆ ಸರಿ. ತಹಶೀಲ್ದಾರ್ ರವರು ಮತ್ತು ಸಹಾಯಕ ಆಯುಕ್ತರು ಫೋನ್ ಮಾಡಿ ಹೇಳಿದ ಮೇರೆಗೆ ನಾನು ಹೋಗಿರುತ್ತೇನೆ. ತಂಬ್ರಹಳ್ಳಿ, ಮುತ್ತೂರು ಮತ್ತು ಕಿತ್ನೂರು ಗ್ರಾಮವನ್ನು ಪರಿಶೀಲನೆ ಮಾಡಲು ಸಮಯ ಸುಮಾರು 2 ತಾಸು ಆಗಿರಬಹುದು. ಮುತ್ತೂರಿನಿಂದ ಹಂಪಸಾಗರ-3 ಗ್ರಾಮ ಸುಮಾರು 25 ಕಿ ಮೀ ಅಂತರ ಇದೆ, 30 ನಿಮಿಷದಲ್ಲಿ ಹೋಗಬಹುದಾಗಿರುತ್ತದೆ. ಕೃತ್ಯಸ್ಥಳದಲ್ಲಿ ಸುಮಾರು ಜನ ನ್ಯಾಯಬೆಲೆ ಅಂಗಡಿಯಿಂದ ಪಡಿತರವನ್ನು ಖರೀದಿ ಮಾಡುತ್ತಿದ್ದು ಎಷ್ಟು ಜನರಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆದರೆ 40-50 ಜನ ಇರಬಹುದು. ಎಲ್ಲಾ ಅಧಿಕಾರಿಗಳು ಸೇರಿ 15 ವಾಹನಗಳಲ್ಲಿ ಹೋಗಿದ್ದೆವು. 1 ನೇ ಆರೋಪಿ ನನಗೆ ಪರಿಚಯಸ್ಥರು ಎಂದರೆ ಸರಿ.

ಆರೋಪಿತರಿಂದಲೇ ಸದರಿ ಕೃತ್ಯವು ಆಗಿರುತ್ತದೆ. ನಾನು ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಒಟ್ಟು 16-17 ಜನ ಅಧಿಕಾರಿಗಳು ಇದ್ದೆವು. ನಮ್ಮ ಜೊತೆ ಕೃತ್ಯಸ್ಥಳದಲ್ಲಿ ಪೋಲೀಸ್ ಅಧಿಕಾರಿಗಳು ಇದ್ದರೆಂದರೆ ಸರಿ. ಆರೋಪಿತರು ನ್ಯಾಯಾಬೆಲೆ ಅಂಗಡಿ ಪರಿಶೀಲಿಸುವಾಗ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲವೆಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾರೂ ಅಧಿಕಾರಿಗಳ ಮೇಲೆ ದೌರ್ಜನ್ಯ ಮಾಡುವುದಿಲ್ಲವೆಂದರೆ ಸರಿಯಲ್ಲ, ಮಾಡುತ್ತಾರೆಂದು ನುಡಿಯುತ್ತಾರೆ. ನಾನು ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಯಾರು ಜೀವಬೆದರಿಕೆಯನ್ನು ಹಾಕಿರುತ್ತಾರೆಂದು ನಿಖರವಾಗಿ ಹೇಳಲು ಆಗುವುದಿಲ್ಲ, ಆದರೆ ಹನುಮೇಶ್ ಎಂಬ ವ್ಯಕ್ತಿಯು ಹಾಕಿರುತ್ತಾರೆ. ಹನುಮೇಶನು ಜೀವಬೆದರಿಕೆ ಹಾಕಿರುವ ಬಗ್ಗೆ ನಾನು ನನ್ನ ಪಿರ್ಯಾದಿನಲ್ಲಿ ಬರೆಸಿರುತ್ತೇನೆ. ಈ ಮಾತನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಕೃತ್ಯಸ್ಥಳಕ್ಕೆ ಹೋಗಿಲ್ಲವೆಂದರೆ ಸರಿಯಲ್ಲ.

ನಾನು ಠಾಣೆಯಲ್ಲಿ ಕೃತ್ಯಸ್ಥಳ ಪಂಚನಾಮೆ ಮತ್ತು ನಕಾಶೆಗೆ ಸಹಿಯನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ಕೃತ್ಯಸ್ಥ,ಳ ಪಂಚನಾಮೆಯನ್ನು ನಾವೇ ಹೇಳಿ ಬರೆಸಿರುತ್ತೇವೆ. ಪೋಲೀಸಿನವರು ಬರೆದಿದ್ದು ನಿಖರವಾಗಿ ಅವರ ಹೆಸರನ್ನು ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ನಿಪಿ-3 ಮತ್ತು 4 ರ ಪೋಟೋಗಳನ್ನು ಸೃಷ್ಟಿಸಿ ಹಾಕಬಹುದು ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮದ್ಯಾಹ್ನ 3 ಗಂಟೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ